ಕ್ರ. ಸಂ. 47,
149ನೇ ಅಧಿವೇಶನ

162

ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅ. ದೇವೇಗೌಡ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.

ಪ್ರಶ್ನೆ: ಬೆಂಗಳೂರಿನ ಹೆಬ್ಬಾಳ ವಿಶ್ವೇಶ್ವರಯ್ಯ ಬಡಾವಣೆ 5ನೇ ಅಡ್ಡರಸ್ತೆಯಲ್ಲಿರುವ ಸೈಟ್ ನಂಬರ್ 499 ನ್ನು 2022ನೇ ಸಾಲಿನಲ್ಲಿ ಶ್ರೀ ಚಾಂದ್‌ಪಾಷ ಎಂಬುವರಿಂದ ಶ್ರೀ ಅತಿಕ್ ಅಹಮ್ಮದ್ ರವರು ಮೆ॥ ಟಾಟಾ ಕ್ಯಾಪಿಟಲ್ ರಿಂದ ರೂ 4 ಕೋಟಿ 21 ಲಕ್ಷ ಸಾಲದ ಮೇಲೆ ಖರೀದಿ ಮಾಡಿರುತ್ತಾರೆ. ಇವರು ಎಲ್ಲಾ ಮೂಲ ದಾಖಲಾತಿಗಳನ್ನು ಹೊಂದಿ, ಸಾಲವನ್ನು ಪಡೆದಿದ್ದು, ಸ್ವತ್ತು ಇವರ ಹೆಸರಿಗೆ ನೋಂದಣಿಯಾಗಿರುತ್ತದೆ. ಫೆಬ್ರವರಿ 2023 ರಲ್ಲಿ ಶ್ರೀಮತಿ ರುಕ್ಮಿಣಿ ಹಾಗೂ ಮತ್ತಿತರು ಇಂಜೆಂಕ್ಷನ್ ಆದೇಶದ ಮೂಲಕ ಸದರಿ ನಿವೇಶನವನ್ನು ಅತಿಕ್ರಮ ಮಾಡಿಕೊಂಡಿದ್ದು, ಈ ಕುರಿತು ಆರ್.ಟಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ. ಈ ಬಗ್ಗೆ ಆರ್.ಟಿ.ನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಶಿವಕುಮಾರ್ ರವರು ದಾಖಲೆಗಳನ್ನು ಪಡೆದು, ವಿಚಾರಣೆ ನಡೆಸಿ ತಿಳಿಸುವುದಾಗಿ ಮೌಖಿಕವಾಗಿ ಹೇಳಿ, ಯಾವುದೇ ದೂರನ್ನು ಸ್ವೀಕರಿಸಲು ನಿರಾಕರಿಸಿರುವುದರಿಂದ ಶ್ರೀಮತಿ ರುಕ್ಮಿಣಿ ರವರ ಕಡೆಯವರು ಸ್ವತ್ತಿಗೆ ಅತಿಕ್ರಮಿಸಿ, ಶ್ರೀ ಅತೀಕ್ ಅಹಮ್ಮದ್ ರವರಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದು, ಇದಕ್ಕೆ ವಿರೋಧ ವ್ಯಕ್ತಪಡಿಸಿದ ಸಂದರ್ಭದಲ್ಲಿ ಆರ್.ಟಿ.ನಗರ ಪೊಲೀಸ್ ಠಾಣೆಯ ಠಾಣಾಧಿಕಾರಿಯವರು ಬಂದೂಕು ತೋರಿಸಿ, ಬೆದರಿಕೆ ಹಾಕಿರುತ್ತಾರೆ. ಆರ್.ಟಿ.ನಗರ ಪೊಲೀಸ್ ಠಾಣೆಯ ಪೊಲೀಸರು ಇದರಲ್ಲಿ ಶಾಮೀಲಾಗಿರುತ್ತಾರೆಂದು ಪ್ರಸ್ತಾಪಿಸಿರುವ ಬಗ್ಗೆ.

## ಸರ್ಕಾರದ ಹೇಳಿಕೆ

ಮೇಲೆ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಆರ್.ಟಿ. ನಗರ ಪೊಲೀಸ್ ಠಾಣೆಯ ದಾಖಲೆಗಳನ್ನು ಪರಿಶೀಲಿಸಲಾಗಿ ದಿನಾಂಕ:06/02/2023 ರಂದು ದೂರುದಾರರಾದ ಶ್ರೀಮತಿ ರುಕ್ಮಿಣಿ ಶ್ರೀನಿವಾಸನ್ ಕೋಂ ಡಾ॥ ಕೆ.ಶ್ರೀನಿವಾಸನ್ #20ಇ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು ರವರು ತಮ್ಮ ದೂರು ಅರ್ಜಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಗಂಗೇನಹಳ್ಳಿ, ಹೆಚ್.ಎಂ.ಟಿ ಬಡಾವಣೆ ಸ್ವತ್ತು ಸಂಖ್ಯೆ:499, ನನ್ನ ತಾಯಿಯಾದ ಶ್ರೀಮತಿ. ಪದ್ಮ ದೊರೈರಾಜನ್ ಹಾಗೂ ನನ್ನ ಹೆಸರಿನಲ್ಲಿ ಜಂಟಿಯಾಗಿ ನೋಂದಣಿಯಾಗಿರುತ್ತದೆ. ಈ ಸ್ವತ್ತಿಗೆ ಚಾಂದ್‌ಪಾಷ, ಶ್ರೀಮತಿ ಯಾಸ್ಮೀನ್ ತಾಜ್, ಶ್ರೀಮತಿ. ತಹಸೀನ್ ಹರಾ ರವರುಗಳು ಅಕ್ರಮವಾಗಿ ಪ್ರವೇಶಿಸಿ ನಮ್ಮ ಸ್ವಾಧೀನ ಅನುಭವಕ್ಕೆ ತೊಂದರೆ ಕೊಡುತ್ತಿದ್ದರಿಂದ ನಾವು ಮಾನ್ಯ ಸಿಸಿಹೆಚ್-7 ನ್ಯಾಯಾಲಯದ ಓ.ಎಸ್ ಸಂಖ್ಯೆ:7762/2022 ರಲ್ಲಿ ಇವರುಗಳ ವಿರುದ್ಧ ದಾವೆ ಹೂಡಿ, ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿಕೊಂಡು ತಾತ್ಕಾಲಿಕ ತಡೆಯಾಜ್ಞೆ ಹಾಗೂ ಏಕಪಕ್ಷೀಯ ಆದೇಶಕ್ಕಾಗಿ ಮನವಿ ಮಾಡಿರುತ್ತೇವೆ. ದಿನಾಂಕ:07/12/2022 ರಂದು ಮಾನ್ಯ ನ್ಯಾಯಾಲಯವು ನಮ್ಮ ಕೋರಿಕೆಯಂತೆ ಅತೀಕ್ ಅಹಮ್ಮದ್ ಮತ್ತು ಇತರರ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಿರುತ್ತದೆ. ಈ ಮಧ್ಯಂತರ ಆದೇಶವು ದಿನಾಂಕ:18/04/2023 ವರೆಗೆ ಜಾರಿಯಲ್ಲಿರುತ್ತದೆ. ಹೀಗಿರುವಾಗ್ಗೆ ಎದುರಾಳಿಗಳು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ, ನಮ್ಮ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸುತ್ತಿದ್ದಾರೆಂದು ಇವರಿಗೆ ಸೂಕ್ತ ಎಚ್ಚರಿಕೆ ನೀಡಬೇಕೆಂದು ನೀಡಿದ ದೂರಿನ ಮೇರೆಗೆ ಆರ್.ಟಿ.ನಗರ ಪೊಲೀಸ್ ಠಾಣಾ ಎನ್.ಸಿ.ಆರ್ ನಂ:41/2023 ನ್ನು ದಾಖಲಿಸಿಕೊಳ್ಳಲಾಗಿರುತ್ತದೆ.

ಈ ದೂರಿಗೆ ಸಂಬಂಧಪಟ್ಟಂತೆ ದೂರುದಾರರಾದ ಶ್ರೀಮತಿ ರುಕ್ಮಿಣಿ ರವರು ಸ್ವತ್ತಿನ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಪರಿಶೀಲಿಸಲಾಗಿ ದಿನಾಂಕ:23/10/1982 ರಂದು ಹೆಚ್.ಎಂ.ಟಿ ಎಂಪ್ಲಾಯಿಸ್ ಕೋ ಆಪರೇಟಿವ್ ಹೌಸ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್ ರಿಂದ ಶ್ರೀ. ಸೈಯದ್ ಹುಸೇನ್ ಬಿನ್ ಲೇಟ್ ಜನಾಬ್ ಸೈಯದ್ ಅಬ್ದುಲ್ಲಾ ಎಂಬುವವರ ಹೆಸರಿಗೆ ವಿಶ್ವೇಶ್ವರಯ್ಯ ನಗರ, ಗಂಗೇನಹಳ್ಳಿ ಬಡಾವಣೆಯ ನಿವೇಶನ ಸಂಖ್ಯೆ:499 ನೋಂದಣಿಯಾಗಿರುವುದು ಕಂಡು ಬಂದಿರುತ್ತದೆ. ಇವರ ಹೆಸರಿಗೆ ಸ್ವಾಧೀನ ಪತ್ರವು ಸಹ ಇರುತ್ತದೆ.

ಈ ನಿವೇಶನವನ್ನು ಸೈಯದ್ ಹುಸೇನ್ ಮತ್ತು ಇವರ ಜಿ.ಪಿ.ಎ ದಾರರಾದ ಅಸ್ಮ ಸೈಯದ್ ಎಂಬುವವರುಗಳು ದಿನಾಂಕ:20/11/1992 ರಂದು ಶ್ರೀಮತಿ. ಪದ್ಮ ದೊರೈರಾಜನ್ ಮತ್ತು ಶ್ರೀಮತಿ ರುಕ್ಮಿಣಿ ಶ್ರೀನಿವಾಸನ್ ರವರುಗಳ ಹೆಸರಿಗೆ ಜಂಟಿಯಾಗಿ ಕ್ರಯ ಮಾಡಿಕೊಟ್ಟಿರುತ್ತಾರೆ. ಸ್ವತ್ತಿನ ಖಾತಾ ಮತ್ತು

ಕಂದಾಯದ ದಾಖಲೆಗಳು ಪ್ರಸ್ತುತದವರೆಗೆ ಶ್ರೀಮತಿ ಪದ್ಮ ದೊರೈರಾಜನ್ ಮತ್ತು ಶ್ರೀಮತಿ ರುಕ್ಮಿಣಿ ಶ್ರೀನಿವಾಸನ್ ರವರುಗಳ ಹೆಸರಿನಲ್ಲಿರುವುದು ಕಂಡು ಬಂದಿರುತ್ತದೆ.

ದೂರುದಾರರಾದ ಶ್ರೀಮತಿ ರುಕ್ಮಿಣಿ ಶ್ರೀನಿವಾಸನ್ ರವರು ಮಾನ್ಯ ಸಿಸಿಹೆಚ್-1, ಪ್ರಧಾನ ಸಿಟಿ ಸಿವಿಲ್ ಹಾಗೂ ಸತ್ರ ನ್ಯಾಯಾಲಯದಲ್ಲಿ ಪೊಲೀಸ್ ರಕ್ಷಣೆಗಾಗಿ ಕೋರಿ ಮನವಿ ಸಲ್ಲಿಸಿದ್ದು, ಘನ ನ್ಯಾಯಾಲಯವು ಪೊಲೀಸ್ ರಕ್ಷಣೆಯನ್ನು ನೀಡುವಂತೆ ಆರ್.ಟಿ.ನಗರ ಪೊಲೀಸ್ ಠಾಣೆಯ ಠಾಣಾಧಿಕಾರಿಯವರಿಗೆ ಸ್ಪಷ್ಟ ನಿರ್ದೇಶನವನ್ನು ನೀಡಿರುತ್ತದೆ. ಅದರಂತೆ ಆರ್.ಟಿ.ನಗರ ಪೊಲೀಸ್ ಠಾಣೆಯ ಠಾಣಾಧಿಕಾರಿಯವರು ಮಾನ್ಯ ನ್ಯಾಯಾಲಯದ ಆದೇಶವನ್ನು ಮತ್ತು ಮಾಹಿತಿಯನ್ನು ಪ್ರತಿವಾದಿಗಳ ಪೈಕಿ ಅತೀಕ್ ಅಹಮ್ಮದ್‌ರವರಿಗೆ ವಾಟ್ಸಾಪ್ ಮುಖೇನ ರವಾನಿಸಿರುತ್ತಾರೆ ಹಾಗೂ ದಿನಾಂಕ:11/02/2023 ರಂದು ಪ್ರತಿವಾದಿಗಳಿಗೆ ಪೊಲೀಸ್ ನೋಟಿಸ್‌ವೊಂದನ್ನು ಅಂಚೆ ಮುಖೇನ ಕಳುಹಿಸಿಕೊಡಲಾಗಿದ್ದು, ಪ್ರತಿವಾದಿಗಳು ನೋಟಿಸ್ ಪಡೆಯಲು ನಿರಾಕರಿಸಿದ್ದರಿಂದ ವಾಪಸ್ಸಾಗಿರುತ್ತದೆ.

ನಿವೇಶನ ಸಂಖ್ಯೆ:499 ಕ್ಕೆ ಸಂಬಂಧಪಟ್ಟಂತೆ ಆರ್.ಟಿ.ನಗರ ಪೊಲೀಸ್ ಠಾಣೆಯ ಠಾಣಾಧಿಕಾರಿಯವರು ಉಪ ನೋಂದಣಾಧಿಕಾರಿಯವರ ಕಛೇರಿಗೆ ಪತ್ರ ವ್ಯವಹಾರ ಮಾಡಿ, ಸ್ವತ್ತಿಗೆ ಸಂಬಂಧಪಟ್ಟ ದೃಢೀಕೃತ ದಾಖಲಾತಿಗಳನ್ನು ಪಡೆದುಕೊಂಡಿರುತ್ತಾರೆ ಹಾಗೂ ಹೆಚ್.ಎಂ.ಟಿ ನೌಕರರ ಗೃಹ ನಿರ್ಮಾಣ ಸಂಘ ನಿಯಮಿತ ಇಲ್ಲಿಗೆ ಮನವಿಯನ್ನು ಸಲ್ಲಿಸಿ, ವಿಶ್ವೇಶ್ವರ ನಗರ, ಗಂಗೇನಹಳ್ಳಿ ಬಡಾವಣೆಯ ನಿವೇಶನ ಸಂಖ್ಯೆ:499, ಶ್ರೀ ಸೈಯದ್ ಹುಸೇನ್ ರವರ ಹೆಸರಿಗೆ ಹಂಚಿಕೆಯಾಗಿರುವ ಬಗ್ಗೆ ದೃಢೀಕೃತ ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ.

ದಿನಾಂಕ:20/02/2023 ರಂದು ಶ್ರೀಮತಿ ರುಕ್ಮಿಣಿ ಶ್ರೀನಿವಾಸನ್ ರವರು ಠಾಣೆಗೆ ಹಾಜರಾಗಿ, ಅತೀಕ್ ಅಹಮ್ಮದ್ ರವರು ಸ್ವತ್ತಿನಲ್ಲಿ ಬೋರ್ಡ್ ಹಾಕಲು ಪ್ರಯತ್ನಿಸಿದ್ದಾರೆ ಹಾಗೂ ಸೆಕ್ಯೂರಿಟಿ ಗಾರ್ಡ್‌ಗೆ ಬೆದರಿಕೆಯೊಡ್ಡಿ, ಗೇಟಿಗೆ ಬದಲಿ ಬೀಗವನ್ನು ಹಾಕಿರುತ್ತಾರೆ ಹಾಗೂ ಸುತ್ತಲಿನ ಸಿಸಿ ಟಿವಿ ಕ್ಯಾಮರಾ ಅಳವಡಿಸುವುದು ಹಾಗೂ ಜನರನ್ನು ಸ್ವತ್ತಿನ ಬಳಿ ಕರೆತಂದು ಭಯಪಡಿಸುತ್ತಿರುತ್ತಾರೆ. ಈ ಬಗ್ಗೆ ನಮಗೆ ರಕ್ಷಣೆ ಕೊಡಬೇಕೆಂದು ಕೋರಿದ ಅರ್ಜಿಯನ್ನು ಆರ್.ಟಿ ನಗರ ಪೊಲೀಸ್ ಠಾಣೆಗೆ ನೀಡಿದ್ದು, ಪೊಲೀಸ್ ಇನ್ಸ್‌ಪೆಕ್ಟರ್, ಆರ್.ಟಿ ನಗರ ರವರು ಸದರಿ ಅರ್ಜಿಯನ್ನು ಸ್ವೀಕರಿಸಿರುತ್ತಾರೆ. ಅದರಂತೆ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಸಿಬ್ಬಂದಿ ಸಮೇತ ಸ್ಥಳಕ್ಕೆ ಭೇಟಿ ನೀಡಿ ಅರ್ಜಿದಾರರಿಗೆ ಸೂಕ್ತ ರಕ್ಷಣೆಯನ್ನು ನೀಡಿರುತ್ತಾರೆ.

ಆರ್.ಟಿ.ನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಮಾನ್ಯ ಸಿಸಿಹೆಚ್-7 ನ್ಯಾಯಾಲಯದ ತಡೆಯಾಜ್ಞೆ ಆದೇಶವನ್ನು ಪಾಲಿಸುವಂತೆ ಪ್ರತಿವಾದಿಗಳಾದ ಅತೀಕ್ ಅಹಮ್ಮದ್ ಹಾಗೂ ಇತರರಿಗೆ ಪೊಲೀಸ್ ನೋಟಿಸ್ ಮೂಲಕ ಮನದಟ್ಟು ಮಾಡಿ, ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಿರುತ್ತಾರೆ ಹಾಗೂ ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿದ ಪ್ರತಿವಾದಿಗಳಿಗೆ ಸ್ವತ್ತಿಗೆ ಅತಿಕ್ರಮ ಪ್ರವೇಶಿಸದಂತೆ ತಡೆದಿರುತ್ತಾರೆ ವಿನಃ ಪ್ರತಿವಾದಿಗಳಿಗೆ ಯಾವುದೇ ರೀತಿಯ ತೊಂದರೆಯನ್ನು ನೀಡಿರುವುದಿಲ್ಲ.

ಒಇ 29 ಪಿಇಎಂ 2023

(ಆರಗ ಜ್ಞಾನೇಂದ್ರ)
ಗೃಹ ಸಚಿವರು